ಶ್ರೀ ಎಸ್. ಆರ್. ಬೊಮ್ಮಾಯಿ. — ಈ ರೀತಿ ಖಾಯಂ ಮಾಡುವುದಕ್ಕೆ ಆಗುವುದಿಲ್ಲವೆಂದು ಎಷ್ಟೋ ಸಲ ಹೇಳಿದ್ದೇವೆ, ನಮ್ಮ ನೀತಿ ಸ್ಪಷ್ಟವಾಗಿದೆ. ಇದರ ಬಗ್ಗೆ ಸಿಂಗಲ್ ಆರ್ಡರ್ ಮಾಡುವುದಕ್ಕೆ ಆಗುವುದಿಲ್ಲ. ಹೈಕೋರ್ಟಿನ ಆಜ್ಞೆ ಇದೆ. ಆದಷ್ಟು ಬೇಗ ಬೇಗ ಅವರನ್ನು ಅಬ್ಸಾರ್ಬ್ ಮಾಡಿಕೊಳ್ಳುವುದಕ್ಕೆ ಪ್ರೊಸೆಸಿಂಗ್ ನಡೆಯುತ್ತಿದೆ, ಒಂದೂವರೆ ವರ್ಷ ಅಂದರೆ ಆದರ ಅರ್ಥ ಅಷ್ಟರೊಳಗೆ ಎಷ್ಟೋ ವೇಕನ್ಸಿಗಳು ಬರುತ್ತವೆ. ಅದರೊಳಗೆ ಅವರನ್ನು ಅಬ್ಸಾರ್ಬ್ ಮಾಡಿಕೊಳ್ಳುತ್ತೇವೆ.

ಶ್ರೀ ಯು. ಭೂಪತಿ.— ನಿನ್ನೆ ಮೇಲ್ಮನೆಯಲ್ಲಿ ಹೇಳಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಖಾಯಂ ಅಂದರೆ ವೇಕೆನ್ಸಿಗಳು ಫಿಲ್‌ಅಪ್ ಆದ ಹಾಗೆ ಅವರನ್ನು ಖಾಯಂ ಮಾಡಲಾಗುತ್ತದೆ.

ಶ್ರೀ ಎಸ್. ಕೆ. ಕಾಂತಾ ಜ್ಯೇಷ್ಠತಾ ಪಟ್ಟಿ ರೂಲ್ಸ್ ತಯಾರು ಮಾಡಿದ ನಂತರ ನಾವು ಆರು ತಿಂಗಳ ಒಳಗಾಗಿ ಈ ಒಂದು ಜ್ಯೇಷ್ಠತಾ ಪಟ್ಟಿಯನ್ನು ತಯಾರು ಮಾಡಿದ್ದೇವೆ. ಇದು ವಿಳಂಬ ಆಗಿಲ್ಲ. ಎರಡನೆಯದಾಗಿ ಎಕನಾಮಿ ಮೆಷರ್ ಆನ್ವಯ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಿಂದ ಈಗಾಗಲೇ ತೆಗೆದುಹಾಕಿದ್ದಾರೆ. ಅವರು ೪೮ ಪರ್ಸೆಂಟ್ ಜನರನ್ನು ಎಲ್ಲಾ ರೀತಿಯಿಂದ ಅಪಾಯಿಂಟ್ ಮಾಡಿದರೆ ಕೆಲವೇ ಸಮಯದಲ್ಲಿ ಇವರನ್ನು ನಾವು ಖಾಯಂ ಮಾಡುವುದರಲ್ಲಿ ಏನೂ ಸಂದೇಹವಿಲ್ಲ. ಆವೇಲೆ ಅಧ್ಯಕ್ಷರೇ, ನಿಮ್ಮ ಲೆಜಿಸ್ಲೇಟ್ ಆಫೀಸಿನಿಂದ ಬಂದಿರತಕ್ಕಂಥ ಪ್ರಶ್ನೆಗಳ ಪಟ್ಟಿಯಲ್ಲಿ ಇವರ ಪ್ರಶ್ನೆ ಮಂಡಿದೆ 'ಸಮಾಜ ಕಲ್ಯಾಣ ಮಂತ್ರಿಗಳು' ಎಂದು ಬರೆದಿದ್ದಾರೆ. ತಾವು ದಯವಿಟ್ಟು ನೋಡಿ. ಏಕೆಂದರೆ ಪಟ್ಟಿಯಲ್ಲಿ ಬರೆದಿರತಕ್ಕದ್ದು 'ಸಮಾಜ ಕಲ್ಯಾಣ ಮಂತ್ರಿಗಳು' ಎಂದು. ಹೀಗಾದಾಗ ಉತ್ತರ ಬರಲಿಕ್ಕೆ ವಿಳಂಬ ಆಗುತ್ತದೆ.

ಅಧ್ಯಕ್ಷರು.— ಶ್ರೀ ಕಾಂತಾರವರೇ ನೋಡಿ ಇಲ್ಲಿ. ಅವರಲ್ಲಿ ಸಮಾಜ ಕಲ್ಯಾಣ ಮಂತ್ರಿಗಳು ಎಂದು ಇದ್ದರೂ ಕೂಡ ಉತ್ತರ ಕೊಡುವವರು ಯಾರು ಎಂದರೆ ನೀವು ಎಂದು ಇದೆ.

ಶ್ರೀ ಎಸ್.ಕೆ. ಕಾಂತಾ.— ಎಲ್ಲಿದೆ?

ಅಧ್ಯಕ್ಷರು.— ಇಲ್ಲಿ ನೋಡಿ. ಕರ್ನಾಟಕ ವಿಧಾನ ಸಭೆ– ಚುಕ್ಕಿ ಗುರುತಿನ ಪ್ರಶ್ನೆ ನಿಂಬೆ.....

ಶ್ರೀ ಎಸ್.ಕೆ. ಕಾಂತಾ.— ಆದರಲ್ಲಿ ಇರಬಹುದು.....

ಅಧ್ಯಕ್ಷರು.— ನೀವು ಸುಮ್ಮನೆ ಡಿಫೆಂಡ್ ಮಾಡುವುದಕ್ಕೆ ಹೋಗಬೇಡಿ. Don't argue. You are arguing a bad case.

ಶ್ರೀ ಎಂ. ಎಸ್. ಕೃಷ್ಣನ್.— ಪ್ರಶ್ನೆಗಳನ್ನು ಪಟ್ಟಿಮಾಡಿ ಯಾವ್ಯಾವ ಮಂತ್ರಿಗಳಿಗೆ ಕಳಿಸಬೇಕೆಂದು ತೀರ್ಮಾನ ಮಾಡುವವರು ಯಾರು?

ಅಧ್ಯಕ್ಷರು.— ಶ್ರೀ ಕೃಷ್ಣನ್‌ರವರೇ, ಇಲ್ಲಿ ಏನಾದರೂ ತಪ್ಪಿದ್ದರೂ ಕೂಡ ಸಂಬಂಧಪಟ್ಟ ಮಂತ್ರಿಗಳಿಗೇ ಫೈಲು ಹೋಗಿರುತ್ತದೆ. ಇದು ಪ್ರಿಂಟ್ ಮಾಡುವಷ್ಟರೊಳಗೆ ಫೈಲು ಅವರಿಗೆ ಹೋಗಿರಬೇಕು.

ಶ್ರೀ ಎಸ್.ಕೆ. ಕಾಂತಾ.— ಇದು ನನಗೆ ರಾತ್ರಿ ೧೨ ಗಂಟೆಗೆ ಬಂದಿದೆ.

ರೈತರಿಗೆ ವಸತಿ ಗೃಹಗಳ ಮಂಜೂರಾತಿ ಕುರಿತು

೮೯೭. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ವಸತಿ ಇಲಾಖೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತರೀಕೆರೆ ತಾಲ್ಲೂಕಿನ ಮಧ್ಯಮ ವರ್ಗದ ರೈತರಿಗೆ ವಸತಿ ಗೃಹಗಳನ್ನು ನಿರ್ಮಿಸಲಾಗಿದೆಯೇ ?

ಆ) ಇಂಥ ಯೋಜನೆಯನ್ನು ಗ್ರಾಮಾಂತರ ಪ್ರದೇಶದಲ್ಲಿ ರೂಪಿಸದೆ ಇರಲು ಕಾರಣವೇನು ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್ (ವಸತಿ ಇಲಾಖೆ ರಾಜ್ಯ ಸಚಿವರು).—

ಅ) ಅಂತಹ ಯೋಜನೆ ಯಾವುದೂ ಸರ್ಕಾರದಲ್ಲಿರುವುದಿಲ್ಲ.

ಆ) ಈಗಾಗಲೇ ಅರ್ಹ ಗ್ರಾಮಾಂತರ ವಸತಿ ಹೀನರಿಗೆ ವಸತಿ ಸೌಲಭ್ಯಗಳನ್ನು ಒದಗಿಸುವ ಉದ್ದೇಶಿತ ಯೋಜನೆಗಳು ಜಾರಿಯಲ್ಲಿರುವುದರಿಂದ, ರೈತರಿಗಾಗಿಯೇ ವಿಶೇಷವಾಗಿ ವಸತಿ ಯೋಜನೆಗಳನ್ನು ಕೈಗೊಳ್ಳುವ ಅವಶ್ಯಕತೆ ಕಂಡು ಬರುವುದಿಲ್ಲ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ಈ ದೇಶದಲ್ಲಿ ಸಾಮಾನ್ಯವಾಗಿ ಜನತಾ ಮನೆಗಳನ್ನು, ಹುಡ್ಕೋ ಮನೆಗಳನ್ನು ಸಾಮಾನ್ಯ ಜನರಿಗೆ ಕೊಡುತ್ತಾರೆ. ಆದರೆ ಮಧ್ಯಮ ವರ್ಗದ ರೈತರಿಗೆ ಕೊಡುವುದಿಲ್ಲ. ಗ್ರಾಮಾಂತರ ಪ್ರದೇಶಗಳ ಗೃಹ ನಿರ್ಮಾಣ ಮಂಡಳಿ ಎಂದು ರಚಿಸಲು ಏಕೆ ಸಾಧ್ಯವಿಲ್ಲ ? ಏಕೆಂದರೆ ಎಲ್ಲರಿಗೂ ಸಾಲ ಸಿಗುತ್ತದೆ. ಈಗ ಮಧ್ಯಮ ವರ್ಗದ ರೈತರಿಗೆ ಯಾರೂ ಸಾಲ ಕೊಡುವುದಿಲ್ಲ. ಗಿರವಿ ಅಂಗಡಿಯಂ ಮಾರ್ವಾಡಿ ಕೂಡ ಈಗಿನ ವ್ಯವಸ್ಥೆಯಲ್ಲಿ ಅತನಿಗೆ ಸಾಲ ಕೊಡುವುದಿಲ್ಲ, ಬ್ಯಾಂಕ್‌ಗಳಲ್ಲೂ ಸಿಗುವುದಿಲ್ಲ. ಈ ದೃಷ್ಟಿಯಿಂದ ಮಧ್ಯಮ ವರ್ಗದ ರೈತರಿಗೆಂದು ಗೃಹ ನಿರ್ಮಾಣ ಮಂಡಳಿಯನ್ನು ರಚಿಸಬೇಕು. ಮಾತ್ರ ತಕ್ಷಣ ಅವರಿಗೆ ಹಣವನ್ನು ಕೊಟ್ಟರೆ ಅವರು ಮನೆ ಕಟ್ಟಿಸಿಕೊಳ್ಳುತ್ತಾರೆ, ಇದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್.—ಜನತಾ ಮನೆಗಳಾಗಲೀ, ಹುಡ್ಕೋ ಮನೆಗಳಾಗಲೀ ಸಾಮಾನ್ಯವಾಗಿ ಎರಡು ಸಾವಿರಕ್ಕಿಂತ ಕಡಿಮೆ ವರಮಾನ ಯಾರಿಗೆ ಇದೆ, ಅಂತಹವರು ಯಾರಾದರೂ ಸಹ ಅರ್ಹರಾಗಿರುತ್ತಾರೆ. ಈ ಕ್ಯಾಟಗರಿಯಲ್ಲಿ ರೈತರು ಬಂದರೆ ಅವರಿಗೂ ಸಹ ಕೊಡಲಾಗುತ್ತದೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಆ ವರ್ಗದ ಜನರನ್ನು ಬಿಟ್ಟು ಮಧ್ಯಮ ವರ್ಗದವರಿಗೆ ಮನೆ ಕಟ್ಟಿಕೊಳ್ಳಲಿಕ್ಕೆ ಗ್ರಾಮಾಂತರ ಪ್ರದೇಶಗಳಲ್ಲಿ ಗೃಹ ನಿರ್ಮಾಣ ಮಂಡಳಿಯನ್ನು ರಚನೆ ಮಾಡಿ ಸಾಮಾನ್ಯ ರೈತರಿಗೂ ಅನುಕೂಲವಾಗುವಂತೆ ವ್ಯವಸ್ಥೆ ಮಾಡಬೇಕು. ಈಗ ಇರತಕ್ಕ ಗೃಹ ನಿರ್ಮಾಣ ಮಂಡಳಿಯಲ್ಲಿ ಮೇಲ್ವರ್ಗದವರಿಗೆ, ಸೆಕೆಂಡ್ ಡಿವಿಜನ್ ಕ್ಲಾರ್ಕ್ಸ್, ಅಧಿಕಾರಿಗಳು, ಅಂತಹವರಿಗೆ ಸಾಲ ಸಿಗುತ್ತದೆ. ನಮ್ಮಂತಹವರಿಗೆ, ರೈತರಿಗೆ, ಮಧ್ಯಮ ವರ್ಗದವರಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ೧೦ ಸಾವಿರ, ೨೦ ಸಾವಿರ ಸಾಲ ದೊರೆಯುವಂತೆ ಒಂದು ಪ್ರತ್ಯೇಕ ಗೃಹ ನಿರ್ಮಾಣ ಮಂಡಲಿಯನ್ನು ಏತಕ್ಕೆ ರಚನೆ ಮಾಡಬಾರದು ?

ಶ್ರೀ ಮಹಮದ್ ಮೊಹಿನುದ್ದೀನ್.—ಹೌಸಿಂಗ್ ಬೋರ್ಡ್‌ನಲ್ಲಿ ಮಧ್ಯಮ ವರ್ಗದವರಿಗೆ ಸೈಟು ಇದ್ದ ಪಕ್ಷದಲ್ಲಿ ಸಾಲ ಕೊಡುವ ವ್ಯವಸ್ಥೆಯನ್ನು ಜಾರಿಗೆ ತಂದಿದ್ದೇವೆ. ಅವರಿಗೆ ಅಲ್ಲಿ ಸಾಲ ಪಡೆಯಲು ಅವಕಾಶವಿದೆ. ಅಲ್ಲಿ ಸಾಲ ತೆಗೆದುಕೊಂಡು ಮನೆಗಳನ್ನು ಕಟ್ಟಿಕೊಳ್ಳಬಹುದು.

ಶ್ರೀ ಬಿ. ಆರ್. ನೀಲಕಂಠಪ್ಪ.—ಆ ಕಾನೂನು ಯಾವಾಗ ಜಾರಿಗೆ ಬಂದಿದೆ ? ಅಲ್ಲಿ ಎಷ್ಟೆಷ್ಟು ಹಣವನ್ನು ಕೊಡುತ್ತಿದ್ದೀರಿ ?

ಶ್ರೀ ಮಹಮದ್ ಮೊಹಿನುದ್ದೀನ್.—ಮಾನ್ಯ ಸದಸ್ಯರು ಈ ಬಗ್ಗೆ ಬೇರೆ ಪ್ರಶ್ನೆ ಕಳುಹಿಸಿ ಕೊಟ್ಟರೆ ಉತ್ತರ ತರಿಸಿಕೊಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಅಧ್ಯಕ್ಷರೇ ನನ್ನ ಪ್ರಶ್ನೆ ಬರಲಿಲ್ಲ ?

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಕಾಲಾವಕಾಶ ಬೇಕೆಂದು ಕೇಳಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ಅಲ್ಲಿ ರೈತರ ಮನೆಗಳು ಜಪ್ತಿಯಾಗುತ್ತಿವೆ, ಕಾಲಾವಕಾಶ ಏತಕ್ಕೆ ಬೇಕು ?

ಅಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳಾದ ಮಾನ್ಯ ಬೊಮ್ಮಾಯಿಯವರು ಕಾಲಾವಕಾಶ ಕೇಳಿದ್ದಾರೆ, ಅವರನ್ನೇ ಬೇಕಾದರೆ ಕೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ವಿವರವಾದ ಮಾಹಿತಿ ಬಂದಿಲ್ಲ. ಆಮೇಲೆ ಉತ್ತರ ಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ರೈತರ ಬಗ್ಗೆ ನಿಮಗೆ ಕಳಕಳಿ ಇಲ್ಲವೇ ?

ಒಬ್ಬ ಮಾನ್ಯ ಸದಸ್ಯರು.—ರೈತರ ಮನೆಗಳನ್ನು ಹರಾಜು ಮಾಡುತ್ತಿರುವುದನ್ನು ನಿಲ್ಲಿಸುತ್ತೀರಾ ? ಅಷ್ಟನ್ನಾದರೂ ಮಾಡುತ್ತೀರಾ ?

ಅಧ್ಯಕ್ಷರು.—ಮಂತ್ರಿಗಳು ಕಾಲಾವಕಾಶ ಕೇಳಿದ್ದಾರೆ. ನಾನು ಕೊಟ್ಟಿದ್ದೇನೆ. ತಾವು ಕೂಡಿ.

ಒಬ್ಬ ಮಾನ್ಯ ಸದಸ್ಯರು.—ರೈತರನ್ನು ಹರಾಜು ಮಾಡುತ್ತಿದ್ದಾರೆ, ಅದನ್ನಾದರೂ ನಿಲ್ಲಿಸಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ವಿಶೇಷವಾಗಿ ಏನಾದರೂ ತೊಂದರೆಯಿದ್ದರೆ ಸದಸ್ಯರು ನನ್ನ ಬಳಿ ಬಂದು ಹೇಳಲಿ, ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ನನ್ನದೊಂದು ಪ್ರಶ್ನೆಯಿದೆ.

ಅಧ್ಯಕ್ಷರು. ನಾನು ನಿಮ್ಮನ್ನು ಕರೆದಾಗ, ನೀವು ನಿಮ್ಮ ಜಾಗದಲ್ಲಿ ಇರಲಿಲ್ಲ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಸಂಬಂಧಪಟ್ಟ ಮಂತ್ರಿಗಳಾದ ಮಾನ್ಯ ಬೊಮ್ಮಾಯಿ ಅವರು ಇಲ್ಲೇ ಇದ್ದಾರೆ, ನಾನು ಹೆಚ್ಚು ವಿವರಗಳನ್ನು ಕೇಳುವುದಿಲ್ಲ, ಇದು ಪತ್ರಿಕೆಗಳಿಗೆ ಸಂಬಂಧಿಸಿದ ವಿಷಯ ದಯವಿಟ್ಟು ಅವಕಾಶ ಕೊಡಿ.

ಅಧ್ಯಕ್ಷರು.—ತಮ್ಮ ಪ್ರಶ್ನೆ ಸಂಖ್ಯೆ ೧೯೮ (೪೨೪) ಯನ್ನು ನಾನು ಕರೆದೆ. ನಾನು ಕರೆದಾಗ ನೀವು ಗೈರುಹಾಜರಿದ್ದಿರಿ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಂತ್ರಿಗಳು ಉತ್ತರ ಕೊಡುತ್ತಾರೆ, ಬೇಗ ಮುಗಿಸುತ್ತೇನೆ. ಅವಕಾಶ ಕೊಡಿ.

ಅಧ್ಯಕ್ಷರು.—ಪ್ರಶ್ನೆಗಳೆಲ್ಲ ಮುಗಿದ ಮೇಲೆ, ಮತ್ತೊಮ್ಮೆ ಯಾರ್ಯಾರು ಗೈರುಹಾಜರಿರುತ್ತಾರೆ ಅಂತಹವರನ್ನು ಕರೆದಿದ್ದೇನೆ. ಆಗಲೂ ನೀವು ಇರಲಿಲ್ಲ. ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಮತ್ತೊಮ್ಮೆ ಕರೆಯಲಿಕ್ಕೆ ಬರುವುದಿಲ್ಲ. ನಿಮ್ಮ ಪ್ರಶ್ನೆಗೆ ಉತ್ತರ ಬಂದಮೇಲೆ ಅದನ್ನು ನಿಮಗೆ ಪತ್ರಿಕೆಗಳವರಿಗೆ ಕಳುಹಿಸುತ್ತೇವೆ. ನಿಮ್ಮ ಪ್ರಶ್ನೆ ಮಹತ್ವವಾದುದು ಗಂಭೀರವಾದುದು. ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಮತ್ತೊಮ್ಮೆ ಕರೆಯುವುದಕ್ಕೆ ಆಗುವುದಿಲ್ಲ ತಾವು ಕುಳಿತುಕೊಳ್ಳಿ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ವಾಣಿ ವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆಯ ಷೇರುಗಳು

೪೭೮. ಶ್ರೀ ಆರ್. ರಾಮಪ್ಪಯ್ಯ (ಮಾನ್ಯ ಕೈಗಾರಿಕಾ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಿರಿಯೂರು ತಾಲ್ಲೂಕಿನಲ್ಲಿರುವ ವಾಣಿ ವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಎಷ್ಟು ರೈತರು ಷೇರು ಬಂಡವಾಳವನ್ನು ಹೂಡಿರುವರು ಹಾಗೂ ಇದರ ಮೊತ್ತವೆಷ್ಟು ?

ಆ) ಈ ಕಾರ್ಖಾನೆಗೆ ಇತರೆ ಹಣಕಾಸು ಸಂಸ್ಥೆಗಳು ನೀಡಿರುವ ಸಾಲದ ಮೊತ್ತವೆಷ್ಟು ?

ಇ) ಕಾರ್ಖಾನೆ ಪ್ರಾರಂಭವಾದಂದಿನಿಂದಲೂ ಈ ಸಾಲ ತೀರುವಳಿಗೆ ಎಷ್ಟು ಹಣವನ್ನು ಸಂದಾಯ ಮಾಡಿದೆ ಹಾಗೂ ಉಳಿದಿರುವ ಸಾಲದ ಮೊತ್ತವೆಷ್ಟು ?

ಶ್ರೀ ಆರ್. ಬಿ. ಪೋತದಾರ್ (ಕೈಗಾರಿಕಾ ಸಹಕಾರ ಮಂತ್ರಿಗಳು).—

ಅ) ವಾಣಿ ವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ದಿನಾಂಕ ೩೦-೯-೧೯೮೬ರ ಅಂತ್ಯಕ್ಕೆ ೬೪೫೫ ರೈತರು ಒಟ್ಟು ರೂ. ೪೫,೭೯,೫೦೦-೦೦ ಷೇರು ಬಂಡವಾಳವನ್ನು ಹೂಡಿರುವರು.

ಆ) ಕಾರ್ಖಾನೆಯು ಉನ್ನತ ಹಣಕಾಸು ಸಂಸ್ಥೆಗಳಾದ ಐ. ಎಫ್. ಸಿ. ಐ. ಎಲ್. ಐ. ಸಿ.ಐ. ಅಪೆಕ್ಸ್ ಬ್ಯಾಂಕ್ ಕೆ. ಎಸ್. ಎಫ್., ಸಿ. ಕರ್ನಾಟಕ ಗೃಹ ಮಂಡಳಿ ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳಿಂದ ರೂ. ೨೦೨. ೮೨ ಲಕ್ಷಗಳ ಸಾಲ ಪಡೆದಿತ್ತು.